ಮಾಸಿಕ ಪತ್ರಿಕೆ

Email ID: arivinaaramane@gmail.com

# ಅರಿವಿನ ಅರಮನೆ

## ಆಶ್ರಯ ಸಂಸ್ಥೆಯ ಜ್ಞಾನ ಅಂಗಳ

www.ashraya-usa.org

ಫೆಬ್ರವರಿ -2016

ಖಾಸಗಿ ಪ್ರಸಾರಕ್ಕಾಗಿ

ASHRAYA

ಶೈಕ್ಷಣಿಕ ಗುಣಮಟ್ಟ ಮೌಲ್ಯೀಕರಿಸಲು ಹಲವಾರು ಕಾರ್ಯಕ್ರಮಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ವತಿಯಿಂದ 2015–16ನೇ ಶೈಕ್ಷಣಿಕ ವರ್ಷ ಓದು, ಬರಹ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಸ್ಪರ್ಧಾ ಕಾರ್ಯಕ್ರಮ ಕಣ್ಣೂರಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು.

## ಓದು, ಬರಹ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಸ್ಪರ್ಧೆ

ಪ್ರತಿ ಸರ್ಕಾರಿ ಶಾಲೆಯು ಶಾಲಾ ಹಂತದಲ್ಲಿ ಸ್ಪರ್ಧಿಸಿ ಆಯ್ಕೆಕೊಂಡು ಪ್ರತಿಭಾವಂತ ಮಕ್ಕಳನ್ನು ನಂತರ ಮಕ್ಕಳು ಕ್ಲಸ್ಟರ್ ಮಟ್ಟದಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳು ವಲಯ ಮಟ್ಟದಲ್ಲಿ ಪಾಲ್ಗೊಗೊಂಡಿದ್ದರು. ವಿಜೇತ ಮಕ್ಕಳಿಗೆ ಪುಸ್ತಕ ಓದುವ ಅಭಿರುಚಿ ಬೆಳೆಸಲು ಉದ್ದೇಶದಿಂದ ಪುಸ್ತಕವನ್ನು ಬಹುಮಾನವಾಗಿ ನೀಡಲಾಡಲಾಯಿತು.

ವಲಯ ಮಟ್ಟದ ಓದು, ಬರಹ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಸ್ಪರ್ಧಾ ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಆನಂದ್‌ರವರ ಪ್ರಸ್ತಾವಿಕ ನುಡಿಯಲ್ಲಿ ಇಲಾಖೆಯ ನೂತನ ಕಾರ್ಯಕ್ರಮದ ಧ್ಯೇಯೋದ್ದೇಶವನ್ನು ತಿಳಿಸಿದರು. ಶಿಕ್ಷಣ ಎಲ್ಲ ಅಂಶಗಳು ಮಗುವಿನ ಬೌದ್ಧಿಕ ಬೆಳವಣಿಗೆ ಮತ್ತು ಸರ್ವಾಂಗೀಣ ಅಭಿವೃದ್ಧಿ ಸಾಧಿಸುವುದರ ಮೂಲಕ ಪರಿಪೂರ್ಣ ವ್ಯಕ್ತಿತ್ವ ರೂಪಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ ಎಂದರು. ಪ್ರತಿ ವಿದ್ಯಾರ್ಥಿಯೂ ತನ್ನ ಕಲಿಕಾ ಸಾಮರ್ಥ್ಯವನ್ನು ಅಭಿವ್ಯಕ್ತಗೊಳಿಸುವ ದೃಷ್ಟಿಯಿಂದ ಪ್ರಪ್ರಥಮ ಬಾರಿಗೆ ಇಲಾಖೆ ಅನುಷ್ಠಾನಗೊಳಿಸಿರುವುದು ಸಂತಸ ವಿಷಯವಾಗಿದೆ. ಇದರ ಸದುಪಯೋಗವನ್ನು ಮಕ್ಕಳು ಪಡೆದು ಶೈಕ್ಷಣಿಕ ಪ್ರಗತಿ ಹೊಂದಬೇಕೆಂದು ಕಿವಿಮಾತು ಹೇಳಿದರು.



ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ.ತಿಮ್ಮೇಗೌಡರವರು ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶೈಕ್ಷಣಿಕ ಸಾಧನೆಯಲ್ಲಿ ಪ್ರತಿಭಾವಂತ ಮಕ್ಕಳು ಕೇವಲ ಬುದ್ಧಿಶಕ್ತಿ ಉಳ್ಳವರಾಗಿರದೇ ಶಾಲಾ ಕಲಿಕೆಯಲ್ಲಿ ವಿವಿಧ ಕೌಶಲಗಳ ಮಹಾತ್ಸಾಧನೆ ಮಾಡುವಂತವರಾಗಿದ್ದಾರೆ. ಶಬ್ಧ ಬಂಡಾರ, ಭಾಷಾಜ್ಞಾನವನ್ನು, ಸ್ಪಷ್ಟತೆ ಹಾಗೂ ವಾಕ್ ಚಾತುರ್ಯವುಳ್ಳ ಸೃಜನಾತ್ಮಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೊಂದಿದ್ದಾರೆ. ಅದಕ್ಕೆ ತಕ್ಕಂತೆ ಶಿಕ್ಷಕರು ಇಂತಹ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಸತ್ಕರಿಸುವುದು ಅವಶ್ಯವೆನಿಸುತ್ತದೆ. ಓದುವ ಹವ್ಯಾಸ ಮತ್ತು ಬರವಣಿಗೆ ಅಭ್ಯಾಸವನ್ನು ಬೆಳೆಸಿಕೊಳ್ಳುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಬೇಕು. ಭಾಷಾ ಕೌಶಲಗಳ ವೃದ್ಧಿಗಾಗಿ ರೂಪಿತವಾದ ಕಾರ್ಯಕ್ರಮ ವಿದ್ಯಾರ್ಥಿಗಳ ಜ್ಞಾನವನ್ನು ಅಭಿವ್ಯಕ್ತಗೊಳಿಸಬೇಕೆಂದು ತಿಳಿಸಿದರು.

ಅರಿವನ ಅರಮನೆಯ ಸಾಕಷ್ಟು ಮಕ್ಕಳು ಈ ಸ್ಪರ್ಧಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೆಚ್ಚಿನ ಪ್ರಶಸ್ತಿಗಳನ್ನು ಗಳಿಸಿರುವುದು ಸಂತಸ ವಿಷಯವಾಗಿದೆ. ಶಾಲಾವಾರು ಮಕ್ಕಳು ಪಡೆದ ಪ್ರಶಸ್ತಿಗಳ ವಿವರ . .ಪುಟ–4



ಹನೂರಿನ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಸರ್ಕಾರೇತರ ಸಂಸ್ಥೆ ಆಶ್ರಯ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿದ್ದ **'ಅರಿವಿನ ಅರಮನೆ ಮಾಸ ಪತ್ರಿಕೆ'** ಬಿಡುಗಡೆ ಸಮಾರಂಭದಲ್ಲಿ ಬಿಇಒ ವೈ.ಕೆ. ತಿಮ್ಮೇಗೌಡ ಮಾತನಾಡಿದರು.


## ಅಧ್ಯಯನಶೀಲ ಗುಣ ಜ್ಞಾನ ವೃದ್ಧಿಯ ಕೀಲಿಕೈ

ಅಧ್ಯಯನ ಶೀಲ ವ್ಯಕ್ತಿತ್ವ ಹೊಂದಿರುವ ಶಿಕ್ಷಕರನ್ನು ಮಕ್ಕಳು ಹೆಚ್ಚು ಅನುಕರಣೆ ಮಾಡುತ್ತಾರೆ ಎಂದು ಹನೂರು ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ. ತಿಮ್ಮೇಗೌಡರವರು ತಿಳಿಸಿದರು.

ನೂರು ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಸರ್ಕಾರೇತರ ಸಂಸ್ಥೆ ಆಶ್ರಯ ಫೌಂಡೇಷನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅರಿವಿನ ಅರಮನೆ ಮಾಸ ಪತ್ರಿಕೆ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು ಶಿಕ್ಷಕರು ಪ್ರತಿದಿನ ವೃತ್ತಪತ್ರಿಕೆಗಳನ್ನು ಓದುವ ಹವ್ಯಾಸ ರೂಡಿ ಮಾಡಿಕೊಂಡು ಜ್ಞಾನಾಭಿವೃದ್ಧಿ ಹೆಚ್ಚಿಸಿಕೊಳ್ಳಬಥೇಕು. ಜೀವನ ಕೌಶಲ ವೃದ್ದಿಸುವ ಪುಸ್ತಕಗಳನ್ನು ಓದುವ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕಾಗಿರುವುದು ಅನಿವಾರ್ಯತೆ. ಇಂದಿನ ಮಕ್ಕಳು ಶಿಕ್ಷಕರ ಆವಭಾವ, ಬೋಧನಾ ಶೈಲಿ, ವರ್ತನೆಗಳನ್ನು ಅನುಕರಣೆ ಮಾಡಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿರುವುದರಿಂದ ಶಿಕ್ಷಕ ವೃಂದ ಜ್ಞಾನ ಬತ್ತಳಿಕೆಯನ್ನು ಹೆಚ್ಚಿಸಿಕೊಂಡು ಮಕ್ಕಳ ಗುರಿ ಸಾಧನೆಡೆಗೆ ಶ್ರಮಿಸಬೇಕೆಂದರು. ಒಂಬತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅರಿವಿನ ಅರಮನೆ ಗ್ರಂಥಾಲಯಗಳನ್ನು ಕೊಡುಗೆ ನೀಡಿರುವ ಆಶ್ರಯ ಸಂಸ್ಥೆಯ ಅಧ್ಯಕ್ಷ ಸಂಸ್ಥೆಯ ಅಧ್ಯಕ್ಷರಾದ ವಾಸುಕಿ ಸುಬ್ಬರಾವ್‌ರವರನ್ನು ಶ್ಲಾಘಿಸಿದರು.

### ಸ್ವಾಗತ ಕೋರುವವರು:

**ಅರಿವಿನ ಅರಮನೆ ಮುಖ್ಯೋಪಾಧ್ಯಾಯರುಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು**



ಅಮೇರಿಕಾದಿಂದ ತನ್ನ ತಾಯ್ನಾಡಿನ ಭಾರತಕ್ಕೆ ಆಗಮಿಸುತ್ತಿರುವ ಆಶ್ರಯ ಸಂಸ್ಥೆಯ ಅಧ್ಯಕ್ಷರಾದ ವಾಸುಕಿ ಸುಬ್ಬರಾವ್‌ರವರಿಗೆ ಎಲ್ಲರೂ ಮನಃಪೂರ್ವಕವಾಗಿ ಸ್ವಾಗತ ಕೋರುತ್ತೇನೆ.

# » ವಿಜ್ಞಾನ ಅರಮನೆ «

**ವಿಜ್ಞಾನ ಕೌತುಕ ತಿಳಿಯಲು**

*__Ashraya Foundation__ is being doing a great job of eliciting the pupils inherent talents like Reading, Painting & Writing etc., All the pupils are having different talents but they don't have the opportunities properly to exhibit it. Through '__Arivina Aramane__' the pupils have got a good platform to present their talents those who are in poor background, interior places and lack of parents encourgement.*

*Here by I am very glad and pleasure to convey my special greatful graditude to Ashraya Foundation and the supporting faculty, Librarians and all for doing this great job without any expectations.*

**Kavitha. V.S. Teacher, Ramapura.**

ಸಂಸ್ಥೆಯ ಸಮಾಜ ಸೇವೆಯ ಮನೋಭಾವನೆ ವಿಭಿನ್ನವಾಗಿದ್ದು, ಶಾಲಾ ಮಕ್ಕಳಿಗೆ ಒಂದು ತರಹದಲ್ಲಿ ವರದಾನವಾಗಿದೆ. ಸಂಸ್ಥೆಯ ಕಲ್ಪನೆಯ ಕುಸಾದ ಈ ಅರಿವಿನ ಅರಮನೆ ನಿಜಕ್ಕೂ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಮಕ್ಕಳಲ್ಲಿರುವ ಸುಪ್ತ, ಅದಮ್ಯ ಪ್ರತಿಭೆಗಳನ್ನು ಹೆಕ್ಕಿ ತೆಗೆದು, ಅದನ್ನು ಪೋಷಿಸಲು, ಸೃಜನಾತ್ಮಕತೆ, ವೈವಿಧ್ಯಮಯ ಹವ್ಯಾಸಗಳನ್ನು ಬೆಳೆಸಿಕೊಳ್ಳಲು, ಮುಂದುವರೆಸಿಕೊಂಡು ಹೋಗಲು ಅವಕಾಶ ಕಲ್ಪಿಸಿದಂತಾಗಿದೆ.

ಪಠ್ಯದ ಸರಳ ಪ್ರಯೋಗಗಳು, ಕಲಿಕಾ ಮೌಲ್ಯಮಾಪನದ ಗ್ರೋಬಿ ಪರೀಕ್ಷೆ, ಚಿತ್ರಕಲಾ ಕೌಶಲ ವೃದ್ಧಿ, ಆಕರ್ಷಕ ಭಿತ್ತಿ ಚಿತ್ರಗಳು, ಪುಸ್ತಕಗಳು ನಮ್ಮ ಶಾಲೆಯ ಮಕ್ಕಳಿಗೆ ಸದಾವಕಾಶ ಒದಗಿ ಬೌದ್ಧಿಕ ಮಟ್ಟವನ್ನು ಉನ್ನತಿಗೊಳಿಸಲು ಸಹಾಯಕವಾಗುತ್ತಿದೆ.

**ಮಂಜುಳ. ಶಿಕ್ಷಕಿ, ಲೊಕ್ಕನಹಳ್ಳಿ**

## ಕಿರು ಸಂಶೋಧನೆಯಿಂದ ಬಾಲ ವಿಜ್ಞಾನಿಗಳಾಗಬಹುದು: ಗೀತಾಅರವಿಂದ್





**ವಿಜ್ಞಾನ ಪ್ರಾಜೆಕ್ಟ್‌ನ ಕುರಿತಂತೆ ವಿಜ್ಞಾನ ಶಿಕ್ಷಕಿ ಸರಸ್ವತಿ ಮತ್ತು ವಿದಾರ್ಥಿಗಳೊಂದಿಗೆ ಸಮಾಲೋಚನೆ ನಡೆಸುತ್ತಿರುವ ಅನುಭವ್ ಸೈನ್ಸ್ ಕ್ಲಬ್‌ನ ಗೀತಾಅವವಿಂದ್ ಮತ್ತು ಅವರ ಸ್ನೇಹಿತೆ ಇದ್ದಾರೆ. ಎರಡನೇ ಚಿತ್ರದಲ್ಲಿ ಜನವರಿ ತಿಂಗಳ ವಿಜ್ಞಾನ ಬೋಧನೆಯಲ್ಲಿ ಬೆಳಕಿನ ವಿವಿಧ ಪ್ರಯೋಗಗಳನ್ನು ಮಕ್ಕಳು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಮೂರನೇ ಚಿತ್ರದಲ್ಲಿ ವಿದ್ಯಾರ್ಥಿನಿ ಪ್ರಯೋಗವನ್ನು ತನ್ನ ಸಹಪಾಠಿಗಳಿಗೆ ವಿವರಿಸುತ್ತಿರುವುದು.**

ಪಠ್ಯ ಪೂರಕವಾಗುವಂತಹ ಅನೇಕ ವಿಜ್ಞಾನ ಪ್ರಾಜೆಕ್ಟ್‌ಗಳಿಗೆ ನೀಡಿ ಅವರೇ ನಿಗದಿತ ನಮೂನೆಯಲ್ಲಿ ಶಿಕ್ಷಕರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ, ತಮ್ಮ ಅಧ್ಯಯನವನ್ನು ಮಾಡಿ ನಿರ್ಣಯಕ್ಕೆ ಬರುವಂತ ಒಂದು ಕಿರು ಸಂಶೋಧನೆ. ಪ್ರತಿ ಮಕ್ಕಳು ಬರೆದಿದ್ದ ಕಿರು ಸಂಶೋಧನೆಯ ಪ್ರಸ್ತಾವನೆ ಗೀತಾಅರವಿಂದರವರು ವೀಕ್ಷಿಸಿ ಮಾರ್ಗದರ್ಶನ ನೀಡಿದರು. ಪ್ರಾಯೋಗಿಕ ಚಟುವಟಿಕೆಯಲ್ಲಿ ಬೆಳಕಿನ ಪರಿಕಲ್ಪನೆಗಳನ್ನು ತಿಳಿಸಿದರು. ಬೆಳಕಿನ ರೇಖೀಯ ಚಲನೆ, ಪಾರದರ್ಶಕ, ಮಿತಪಾರದರ್ಶಕ, ಅಪಾರದರ್ಶಕ ವಸ್ತುಗಳು, ಬೆಳಕಿನ ಪ್ರತಿಫಲನ, ಸಮತಲ ದರ್ಪಣದಲ್ಲಿ ಪ್ರತಿಫಲನ, ಬಹು ಪ್ರತಿಫಲನ, ಬೆಳಕಿನ ವಕ್ರೀಭವನ, ಪೀನ ಮಸೂರ, ನಿಮ್ನ ಮಸೂರ, ಬೆಳಕಿನ ವರ್ಣ ವಿಭಜನೆ, ಪೀನ ಮಸೂರ C ಮತ್ತು F ಗಳ ನಡುವೆ ವಸ್ತುವನ್ನಿಟ್ಟಾಗ ಉಂಟಾಗುವ ಬಿಂಬಗಳನ್ನು ಮೂಡಿಸಿ ಮಕ್ಕಳಿಗೆ ತಿಳಿಸಿದರು. ನಂತರ ಮಕ್ಕಳೇ ಪ್ರಾಯೋಗಿಕ ಚಟುವಟಿಕೆಗಳನ್ನು ಕೈಗೊಂಡಿದರು.

| ಸ್ಪರ್ಧಾ ವಿಭಾಗ | | ಪ್ರದರ್ಶನ ವಿಭಾಗ | |
|---|---|---|---|
| ಚಿತ್ರಕಲೆ: | Still Life<br>Sketching & Shading<br>Portrait<br>Painting Water color | ಚಿತ್ರಕಲೆ | Still Life<br>Sketching & Shading<br>Portrait<br>Painting Water color |
| ವಿಜ್ಞಾನ ಸಂಘ: | ರಸಾಯನ ಶಾಸ್ತ್ರ<br>ಬೆಳಕು<br>ಕಾಂತತ್ವ | ವಿಜ್ಞಾನ ಸಂಘ | ವಿಜ್ಞಾನ ಪ್ರಾಜೆಕ್ಟ್<br>ಗೀತಾ ಅರವಿಂದ ಪ್ರಯೋಗಗಳು<br>ಅರವಿಂದ ಗುಪ್ತ ಪ್ರಯೋಗಗಳು<br>ಲ್ಯಾಬ್ ರಿಪೋರ್ಟ್ |
| ಗ್ರಂಥಾಲಯ ಚಟುವಟಿಕೆಪದಬಂಧ | ದಿನಪತ್ರಿಕೆ ಕ್ವಿಜ್<br>ಸ್ಪೀಡ್ ರೀಡಿಂಗ್<br>ಜ್ಞಾಪಕ ಶಕ್ತಿ ಸ್ಪರ್ಧೆ<br>ಪುಸ್ತಕದ ಹೆಸರು ಪತ್ತೆ ಹಚ್ಚುವ ಸ್ಪರ್ಧೆ | ಗ್ರಂಥಾಲಯ ಚಟುವಟಿಕೆ | "ನಾನು ಗ್ರಂಥಾಲಯ ಇಷ್ಟ ಪಡುತ್ತೇನೆ ಏಕೆಂದರೆ"<br>ಗ್ರಂಥಾಲಯದ ಕವನಗಳು<br>ಗ್ರಂಥಾಲಯ ಮರದ ಮಾದರಿ<br>ಕಥೆ ಬರೆದಿರುವ ಚಾರ್ಟ್ |

**ವಿಶೇಷ ಬಹುಮಾನಗಳು:**

1. ಗ್ರಂಥಾಲಯದಲ್ಲಿ ಅತೀ ಹೆಚ್ಚು ಪುಸ್ತಕ ಓದಿರುವ ಒಬ್ಬ ವಿದ್ಯಾರ್ಥಿಗೆ.
2. ವಿಜ್ಞಾನ ಸಂಘದ ಒಬ್ಬ ಕ್ರಿಯಾಶೀಲ ವಿದ್ಯಾರ್ಥಿಯ ಬಹುಮಾನ.
3. ಚಿತ್ರಕಲಾ ಸಂಘದಲ್ಲಿರುವ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಗೆ ಬಹುಮಾನ ನೀಡಲಾಗುತ್ತದೆ.

# » ಚಿತ್ರಕಲಾ ಅರಮನೆ «

ಕೌಶಲ ಬೆಳವಣಿಗೆಗಾಗಿ

## ಜೀವನಕ್ಕೆ ಆಧುನಿಕ ಲೇಪನ ನೀಡುವ ಮಹಾತಾಣ: ಗ್ರಂಥಾಲಯ

A Library is the delivery room for the birht of ideas, a place where history comes to life ಎಂಬ ವಾಕ್ಯವು ನಾರ್ಮನ್ ಕಸಿನ್ಸ್‌ರವರ ಅಂತರಾಳದ ಮಾತಾಗಿದೆ. ಈ ಮಾತು ನಿಜಕ್ಕೂ ಸತ್ಯ ಹಾಗೂ ಜಗತ್ತಿನ ಅದೆಷ್ಟೋ ಜನರನ್ನು ಗ್ರಂಥಾಲಯಗಳಿಗೆ ಹೋಗಿ, ಒಮ್ಮೆಯಾದರೂ ಪುಸ್ತಕವನ್ನು ಓದೋಣ ಎನ್ನುವ ಮನೋಭಾವವನ್ನು ಉಕ್ಕಿಸುತ್ತದೆ. ನಾವಿನ್ಯತೆಯುಳ್ಳ ವಿಚಾರಗಳು ಹುಟ್ಟುವುದೇ ಈ ಗ್ರಂಥಾಲಯ ಎನ್ನುವ ದೇವಾಲಯದಲ್ಲಿ ಮತ್ತು ಇತಿಹಾಸದ ಪುಟಗಳಲ್ಲಿನ ವಿಚಾರಗಳನ್ನು ಜೀವಂತಗೊಳಿಸಿ ವಾಸ್ತವ ಜೀವನಕ್ಕೆ ಆಧುನಿಕ ಲೇಪನ ನೀಡುವ ಮಹಾತಾಣವೇ ಗ್ರಂಥಾಲಯ.

"The Library is the temple of learning and learning has liberated more people than all the wars in the history" ಎನ್ನುವ ಕಾರ್ಲ್ ರೋವನ್‌ರವರ ಅಭಿಪ್ರಾಯವನ್ನು ಅರಿಯುವುದಾದರೆ ಗ್ರಂಥಾಲಯದ ಮಹತ್ವವು ನಮಗೆ ತಿಳಿಯುತದೆ. ಗ್ರಂಥಾಲಯವು ಕಲಿಕೆಯ ದೇವಾಲಯ ಮತ್ತು ಕಲಿಕೆಯಿಂದ ಪ್ರೇರೇಪಿತರಾಗುವ ಜನರ ಸಂಖ್ಯೆಯು ಇತಿಹಾಸದ ಯುದ್ಧಗಳಿಗಿಂತ ಹೆಚ್ಚು ಎನ್ನುವ ಮಾತು ನಿಜಕ್ಕೂ ಸತ್ಯ.

ಗ್ರಾಮೀಣ ಪ್ರದೇಶದಲ್ಲಿರುವ ಬಡಮಕ್ಕಳಿಗೆ 'ಅರಿವಿನ ಅರಮನೆ' ಎಂಬ ಹೆಸರಿನಲ್ಲಿ 'ಆಶ್ರಯ' ಸಂಸ್ಥೆಯು ಮಕ್ಕಳ ಕಲಿಕೆಗೆ ಆಸರೆಯಾಗಿ ನಿಂತು, ಪುಟ್ಟ ಪುಟ್ಟ ಮಕ್ಕಳ ಬದುಕಿನ ಪುಟವನ್ನು ಧನಾತ್ಮಕವಾಗಿ ಉಜ್ವಲಗೊಳಿಸುತ್ತಿರುವ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಾಸುಕಿಸುಬ್ಬರಾವ್‌ರವರ ಕೊಡುಗೆ ಅಪಾರವಾದುದ್ದು. ಇವರು ಕಡಲಾಚೆಯಲ್ಲಿ ವಾಸಿಸುತ್ತಿದ್ದರೂ ಅವರ ಮನಸ್ಸು ಮಾತ್ರ ಬಡಮಕ್ಕಳ ಅಭ್ಯುದಯಕ್ಕಾಗಿ ತುಡಿಯುತ್ತಿದೆ. ಇವರಿಗೆ ಸಮಸ್ತ "ಅರಿವಿನ ಅರಮನೆ"ಯನ್ನು ಹೊಂದಿರುವ ಶಾಲೆಗಳ ಪರವಾಗಿ ಅನಂತ ಅನಂತ ಧನ್ಯವಾದಗಳು ಹಾಗೂ ಅರಿವಿನ ಅರಮನೆಯ ಬಳಗದವರಿಗೂ ಧನ್ಯವಾದಗಳು.

**–ಯು.ಜಿ. ಮೋಹನ ಕುಮಾರ ಆರಾಧ್ಯ.**
**ಉ.ಸ.ಹಿ.ಪ್ರಾ.ಶಾಲೆ, ಬಸಪ್ಪನದೊಡ್ಡಿ.**

## 'ನಾ ಕಂಡಂತೆ' ನನ್ನ ಶಾಲೆಯ ಗ್ರಂಥಾಲಯ

'ಜ್ಞಾನದಿಂದ ಬುದ್ಧಿವಂತನಾಗಬಹುದಾದರೂ ತಿಳುವಳಿಕೆ ಬರುವುದು ವಿದ್ಯೆಯಿಂದ' ಎಂಬ ನೆಹರುರವರ ಮಾತಿನಂತೆ ಶಾಲೆಯಲ್ಲಿ ಸಿಗುವ ವಿದ್ಯೆ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಅವರ ಸ್ವ ಅಧ್ಯಯನಕ್ಕೆ ಹೇಗೆ ಸಹಾಯಕವಾಗ ಬಲ್ಲದು ಎಂಬುದನ್ನು ಅವಲೋಕಿಸ ಬೇಕಾಗುತ್ತದೆ. ಶಾಲೆಯು ಶಿಕ್ಷಕ ಮತ್ತು ಮಕ್ಕಳು ಸೇರಿ ಪಾಠ ಮಾಡುವ–ಕೇಳುವ ಕೇಂದ್ರವಾಗಿರುವುದಿಲ್ಲ. ಭವಿಷ್ಯವನ್ನು ರೂಪಿಸುವ ಸ್ವಯಂ ಶಕ್ತಿಯನ್ನು ಶಾಲೆಯ ಕರ್ತವ್ಯವಾಗಿದೆ.

ದಿನ ನಿತ್ಯದ ಪಾಠಗಳಿಂದ ಸ್ವಯಂಪ್ರೇರಿತವಾಗಿ ಮಗುವಿನಲ್ಲಿ ಉಂಟಾಗುವ ಪ್ರಶ್ನೆಗಳಿಗೆ ಶಾಲೆಯಲ್ಲಿ ಉತ್ತರ ಸಿಗಬೇಕು. ಶಿಕ್ಷಕರು ಮಗುವಿಗೆ ಪ್ರೇರೇಪಿಸುತ್ತಾ ಗ್ರಂಥಾಲಯವು ಮಾಹಿತಿ ಒದಗಿಸುತದೆ.

ಪ್ರಸ್ತುತ ಶಾಲೆಗಳ ಗ್ರಂಥಾಲಯುದ ಪರಿಸ್ಥಿಗಳು ಅಷ್ಟೊಂದು ಕ್ರಿಯಾಶೀಲವಾಗಿಲ್ಲ. ಬೆರಳೆಣಿಗೆಯಷ್ಟು ಶಾಲೆಗಳಲ್ಲಿ ಮಾತ್ರ ಗ್ರಂಥಾಲಯಗಳು ವ್ಯವಸ್ಥಿತವಾಗಿರುವುದನ್ನು ಕಾಣಬಹುದು. ಆದರೆ ಬಹುಪಾಲು ಶಾಲೆಗಳಲ್ಲಿನ ಗ್ರಂಥಾಲಯ ಧೂಳು ಹಿಡಿಯುತ್ತಿರುವುದು ವಿಷಾದನೀಯ.

ಇಂತಹ ಪರಿಸ್ಥಿತಿಯಲ್ಲಿ ಗ್ರಂಥಾಲಯದ ಪ್ರಾಮುಖ್ಯತೆ ಹೆಚ್ಚಿಸುವ ದೃಷ್ಟಿಯಿಂದ ಆಶ್ರಯ ಫೌಂಡೇಷನ್ ಬೆಂಗಳೂರು. ಇವರ ಆಶ್ರಯದಲ್ಲಿ 'ಅರಿವಿನ ಅರಮನೆ' ಕಾರ್ಯಕ್ರಮ ಉತ್ತಮವಾಗಿ ನಡೆಸುತಿದೆ. ಮಕ್ಕಳಲ್ಲಿ ಗ್ರಂಥಾಲಯದ ಮಹತ್ವವನ್ನು ತಿಳಿಸಿ ಓದುವ ಆಸಕ್ತಿ ಹೆಚ್ಚಿಸಿ ಸದ್ಬಳಕೆ ಮಾಡಿಕೊಳ್ಳುವಂತೆ ಮಕ್ಕಳಲ್ಲಿ ಜ್ಞಾನದ ಬೀಜವನ್ನು ಬಿತ್ತುತ್ತಿದೆ.

**ಪೊನ್ನುಸ್ವಾಮಿ, ಶಿಕ್ಷಕ ಸ.ಹಿ.ಪ್ರಾ. ಶಾಲೆ, ಕೆಂಪಯ್ಯನಹಟ್ಟಿ**

## ತಿಂಗಳ ಪುಸ್ತಕದಲ್ಲಿ ಮಾಲಿನ್ಯ ಕುರಿತು ಚರ್ಚಿಸುತ್ತಿರುವ ಮಕ್ಕಳು



**'ಬುಕ್ ಆಫ್ ದ ಮಂಥ್' ಕಾರ್ಯಕ್ರಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಶಿಕ್ಷಕಿ ಮಂಜುಳರೊಂದಿಗೆ ಚರ್ಚೆಯಲ್ಲಿ ತೊಡಗಿರುವುದು.**

ಜನವರಿ ತಿಂಗಳಲ್ಲಿ ಪರಿಸರ ಜಾಗೃತಿ ಮೂಡಿಸುವ ಸಲುವಾಗಿ ಮಕ್ಕಳಿಗೆ ಮಾಲಿನ್ಯ ಕುರಿತಂತೆ ಪುಸಕಗಳನ್ನು ಓದಲು ಕಾಲಾವಧಿ ನೀಡಿದರು. ನಂತರ ಅದನ್ನು ಅಧ್ಯಯನ ಮಾಡಿ ಸಂಪೂರ್ಣ ಮಾಹಿತಿ ಕಲೆಹಾಕಿ ಮಕ್ಕಳು ಮಾಲಿನ್ಯಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ತಿಳಿದುಕೊಂಡು ಬಂದು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

## ನ್ಯೂಸ್ ಪೇಪರ್ ಕ್ವಿಜ್



**ಸಂಸ್ಥೆಯ ನೂತನ ಕಾರ್ಯಕ್ರಮವಾದ ನ್ಯೂಸ್ ಪೇಪರ್ ಕ್ವಿಜ್‌ಯನ್ನು ನಡೆಸುತ್ತಿರುವ ಸಂಸ್ಥೆಯ ಆಡಿಟರ್ ಬೆಂಗಳೂರು ಶ್ಯಾಮ್.**

ಮಕ್ಕಳಲ್ಲಿ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸುವುದು ನ್ಯೂಸ್ ಪೇಪರ್ ಕ್ವಿಜ್‌ನ ಉದ್ದೇಶವಾಗಿದೆ. ಗ್ರಂಥಾಲಯ ಪ್ರಮುಖ ಚಟುವಟಿಕೆಯಾದ ನ್ಯೂಸ್ ಪೇಪರ್ ಕ್ವಿಜ್ ಪ್ರಾಪಂಚಿಕ ಜ್ಞಾನದ ಜೊತೆಗೆ ಅವರ ಕಲಿಕೆಗೆ ಸಹಾಯಕವಾಗಿದೆ. ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಹಂತದಲ್ಲಿ ನಡೆದ ಘಟನೆಗಳನ್ನು ತಿಳಿಯಲು ಅನುಕೂಲವಾಗಿದೆ ಎನ್ನುತ್ತಾರೆ ಎಲ್ಲಾ ಅರಿವಿನ ಅರಮನೆ ಶಾಲೆಯ ಮುಖ್ಯಶಿಕ್ಷಕರುಗಳು.

ಮಕ್ಕಳ ಆ ತಿಂಗಳಲ್ಲಿ ಕಲಿತಿರುವ ಪತ್ರಿಕೆಗಳ ಬಗ್ಗೆ ಶ್ಯಾಮ್‌ರವರು ಮೌಲ್ಯಮಾಪನ ಮಾಡಿ ಮಕ್ಕಳ ಪ್ರಗತಿಯನ್ನು ಪರೀಕ್ಷಿಸಿ, ಮಾರ್ಗದರ್ಶನ ನೀಡಿದರು.



## ಚಿತ್ರಗಳು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತದೆ

ಕೆಂಪಯ್ಯನಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಚಿತ್ರಕಲಾ ವಿಭಾಗದಲ್ಲಿ ಜನವರಿ ತಿಂಗಳಲ್ಲಿ ಮಕ್ಕಳಿಗೆ ಪೆನ್ಸಿಲ್ ಶೇಡಿಂಗ್ ತರಬೇತಿಯನ್ನು ಆರ್ಟಿಸ್ಟ್ ಸಿದ್ದು ನೀಡಿದರು. ಶೇಡಿಂಗ್ ಮಾಡುವ ವಿಧಾನಗಳಲ್ಲಿ ಪೆನ್ಸಿಲ್ ಹಿಡಿಯುವ ಶೈಲಿ, ಚಿತ್ರದ ಮುಖ್ಯಭಾಗ ಮತ್ತು ಚಿತ್ರದ ನೆರಳಿನ ಭಾಗಗಳನ್ನು ಬಿಡಿಸುವುದನ್ನು ಅಚ್ಚುಕಟ್ಟಾಗಿ ಮಕ್ಕಳಿಗೆ ತಿಳಿಸಿದರು. ಮಕ್ಕಳು ಕುತೂಹಲಕಾರಿಯಾಗಿ ವೀಕ್ಷಿಸುತ್ತಾ ತಮ್ಮದೆಯಾದ ಪ್ರಶ್ನೆಗಳನ್ನು ಕೇಳಿ ಉತ್ತರಪಡೆದರು. ನಂತರ ಮಕ್ಕಳು ಸಾಮಗ್ರಿಗಳನ್ನು ಪಡೆದು ಚಿತ್ರ ಬಿಡಿಸಲು ಸಜ್ಜಾದರು. ಅವರಲ್ಲಿ ಜಗಪತಿಬಾಬು ಕರಡಿ ತನ್ನ ಮರಿಗಳೊಂದಿಗೆ ಇರುವ ಚಿತ್ರವನ್ನು ಸುಂದರವಾಗಿ ಬಿಡಿಸಿದನು. ಎಲ್ಲಾ ಮಕ್ಕಳು ಸಂತಸದಿಂದ ತಮ್ಮ ಚಿತ್ರಕಲೆಯಲ್ಲಿ ತೊಡಗಿಕೊಂಡರು.

# » ಮಕ್ಕಳ ಅರಮನೆ «

**ಪ್ರತಿಭೆ ಅನಾವರಣಗೊಳಿಸಲು**

## ಜ್ಞಾನದ ಬೆಳಕು

ಕಣ್ಣಲ್ಲಿ ಕಾಂತಿಯ ಕಂಡೆ
ಮುಗಿಲಲ್ಲಿ ನಕ್ಷತ್ರವ ಕಂಡೆ
ಮನದಲ್ಲಿ ಶಾಂತಿಯ ಕಂಡೆ
ತಾಯಿ ಇರುವಲ್ಲಿ ಪ್ರೀತಿ ಮಮತೆಯ ಕಂಡೆ
ಆದರೆ ನಮ್ಮ ಶಾಲೆಯ ಅರಿವಿನ ಅರಮನೆಯಲ್ಲಿ
ಜ್ಞಾನದ ಬೆಳಕ ಕಂಡೆ........
ವಿದ್ಯೆ ಎಂಬುದು ಕಲೆ
ಅದಕ್ಕೆ ಕೊಡಬೇಕು ಬೆಲೆ
ಅದೇ ನಮ್ಮ ಜೀವನಕ್ಕೆ ನೆಲೆ
ಶಾಲೆಯ ಗ್ರಂಥಾಲಯ,
ಜ್ಞಾನದ ಆಲಯ,
ಜೀವನದ ಸುಗಮದ ದಾರಿಗೆ,
'ಅರಿವಿನ ಅರಮನೆ' ದೀವಿಗೆ.

**ಸುಲೋಚನ. ಎಸ್.**
**5ನೇ ತರಗತಿ**
**ಮಣಗಳ್ಳಿ**


ವಿಜ್ಞಾನ ಕಲಿಕೆಯಲ್ಲಿ ನಾನು ಹಿಂದುಳಿದಿದ್ದೆ, ತರಗತಿಯಲ್ಲಿ ಕೇಳಿವ ಪ್ರಶ್ನೆಗಳಿಗೆ ಉತ್ತರಿಸಲು ಚಟಪಡಿಕೆಯಾಗುತ್ತಿತ್ತು. ಆದರೆ ವಿಜ್ಞಾನ ಸಂಘದಲ್ಲಿ ಪ್ರಯೋಗ ಮಾಡುತ್ತಿರುವುದರಿಂದ ಚೆನ್ನಾಗಿ ಅರ್ಥವಾಗುತ್ತಿದೆ. ನಾನು ಕಲಿಯ ಬಲ್ಲೇ ಎಂಬ ಉತ್ಸಾಹ ದೊರೆತಿದೆ. ಪಠ್ಯವಿಷಯವನ್ನು ತರಗತಿಯಲ್ಲಿ ಬೋಧನೆ ಮಾಡುವ ಮೊದಲೆ ಇಲ್ಲಿ ಹೇಳಿಕೊಡುವುದರಿಂದ ಎಲ್ಲಾ ವಿಷಯಗಳು ಚೆನ್ನಾಗಿ ಅರ್ಥವಾಗುತ್ತಿದೆ. ಅಲ್ಲದೇ ಗ್ರಂಥಾಲಯದಲ್ಲಿ ಸಾಕಷ್ಟು ಪುಸ್ತಕಗಳಿರುವುದರಿಂದ ಜ್ಞಾನದ ಕಣಜವನ್ನು ಹೆಚ್ಚಿಸಿಕೊಂಡು ತರಗತಿಯಲ್ಲಿ ನೀಡುವ ಪ್ರಾಜೆಕ್ಟ್‌ಗಳನ್ನು ಮಾಡಲು ಗ್ರಂಥಾಲಯದ ಪುಸ್ತಕಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. **ಎಂ.ಮಹಾಲಕ್ಷ್ಮಿ(8ನೇ), ಮಂಗಲ**


ಜಗಪತಿಬಾಬು



ಪ್ರಭು

## ವಿಜ್ಞಾನ ಪದಬಂಧ



**ಮೇಲಿಂದ ಕೆಳಕ್ಕೆ**

1. ಇದಕ್ಕೆ ಹಗ್ಗಕಟ್ಟಿ ಕೋಟೆಗೆ ಲಗ್ಗೆ ಹಾಕುತ್ತಿದ್ದರು (2)
2. ಇರುಳು ಹಾರಾಟದ ಚಿಟ್ಟೆ (3)
4. ಇರುಳಿನ ದಾರಿ ದೀಪ (4)
6. ಮಳೆಗಾಲದ ಗಾಯಕ (3)
7. ಕುಯುಕ್ತಿಗೆ ಹೆಸರಾಂತ ಪ್ರಾಣಿ (2)
9. ಹೂವಿಂದ ಹೂವಿಗೆ ಹಾರಿ ಮಕರಂದ ಹೀರುವ ಕೀಟ (5)
10. ಗ್ರಾಮ ಸಿಂಹ (3)
12. ತಲೆ ತಲೆಗೆ ಬಡಿದಾಡಿ, ಕಾಳಗಕ್ಕೆ ಪ್ರಸಿದ್ಧವಾದ ಪ್ರಾಣಿ (3)
13. ಕಣ್ಣಿಲ್ಲದೆಯೇ ಇರುಳಿನ ನಂ.1 ಆಟಗಾರ (3)
15. ಉ.ಅಮೇರಿಕದ ಈ ಮೀನಿಗೇನಾದರು ಜೀವ ಸಹಿತ ಸಿಕ್ಕರೆ ಮುಗಿಯಿತು ಕತೆ(3)
18. ಎಲ್ಲೋ ಮೆಲೆ ಹಾರಾಡುತ್ತಿದ್ದರೂ ಈ ಹಕ್ಕಿಯ ದೃಷ್ಟಿ ಅತ್ಯಂತ ಚುರುಕು (2)

**ಎಡದಿಂದ ಬಲಕ್ಕೆ**

1. ಬೆಂಕಿ ಕೋಳಿ (4)
3. ಸಾಗರದ ಭಾರೀ ಸಸ್ತನಿ (4)
5. ವಿಷ್ಣುವಿನ ವಾಹನ (3)
8. ಮಣಿಮಣಿಗಾರ ಮಣಿ ಶೃಂಗಾರ ಮುಟ್ಟಿದರೆ ಹಾಹಾಕಾರ (2)
9. ಈ ಹಕ್ಕಿ ಹಿಂದೆ ಅಂಚೆ ರವಾನೆ ಮಾಡುತ್ತಿತ್ತು (4)
10. ಗಿಳಿ (2)
11. ಒಂಟೆಯನ್ನು ಹೋಲುವ ಉ.ಅಮೇರಿಕಾದ ಪ್ರಾಣಿ (3)
14. ಮರದ ಮೇಲಿನ ನಮ್ಮ ಬಂಧು? (2)
16. ಸ್ವಜಾತಿ ಭಕ್ಷಕ ಪಕ್ಷಿ? (3)
17. ದಶಾವತಾರಗಳಲ್ಲಿ ಒಂದು (3)

**ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಓದು, ಬರಹ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಸ್ಪರ್ಧೆಯಲ್ಲಿ ವಿಜೇತರಾದ ಅರಿವಿನ ಅರಮನೆ ಗ್ರಂಥಾಲಯದ ಮಕ್ಕಳು**

| ಶಾಲೆಗಳು | ಓದು | ಬರಹ | ಅಭಿವ್ಯಕ್ತಿ |
|---|---|---|---|
| ಕೆಂಪಯ್ಯನಹಟ್ಟಿ | ನಾಗವಳ್ಳಿ | | ತನುಜಾ |
| ಮಂಗಲ | ಧನಲಕ್ಷ್ಮಿ, ಕವಿತಾಲಕ್ಷ್ಮಿ ಮೇಘನ | ಸಂಜನಾ | ಯೋಗೇಶ, ಮಹಾಲಕ್ಷ್ಮಿ |
| ರಾಮಾಪುರ | ಐಶ್ವರ್ಯ | ನವ್ಯಶ್ರೀ, ಪ್ರೇಮ ರಶ್ಮಿ | ಗೀತಾ ಪವಿತ್ರ |
| ಕಣ್ಣೂರು | ಲೀಲಾವತಿ | | ಸ್ನೇಹ. ಆರ್ |
| ಹನೂರು | | | ಮೀರಾ, ಪವಿತ್ರ |
| ಲೊಕ್ಕನಹಳ್ಳಿ | ಚೈತ್ರ | ಪುಷ್ಪಾವತಿ | ಸುಷ್ಮಿತಾ |
| ಬಸಪ್ಪನದೊಡ್ಡಿ | ನಯನ, ಅಭಿಷೇಕ್ ಶರತ್‌ಕುಮಾರ್ | | |

## ದಾರಿ ದೀಪ-ಗ್ರಂಥಾಲಯ

ಊರಿಗೊಂದು ಶಾಲೆಯಿರಬೇಕು
ಶಾಲೆಯಲ್ಲಿ ಮಕ್ಕಳಿರಬೇಕು
ಮಕ್ಕಳಿಗೊಂದು ಗ್ರಂಥಾಲಯವಿರಬೇಕು
ಊರಿಗೊಂದು ವನ
ಮನೆಗೊಂದು ಮರ
ಶಾಲೆಗೊಂದು ಗ್ರಂಥಾಲಯ
ತಾಯಿ ಕೊಟ್ಟ ಜನ್ಮವನ್ನು
ತಂದೆ ಕೊಟ್ಟ ಒಲವನ್ನು
ಗುರು ಕೊಟ್ಟ ವಿದ್ಯೆಯನ್ನು
ಅರಿವಿನ ಅರಮನೆ ಗ್ರಂಥಾಲಯ
ಪುಸ್ತಕದಿಂದ ಪಡೆದ ಜ್ಞಾನವನ್ನು
ಎಂದಿಗೂ ಮರೆಯಲಾಗುವುದಿಲ್ಲ....

**ಸುನ್ನತ್ ಬಾನು. ಎ.**
**8ನೇ ತರಗತಿ**
**ಬಸಪ್ಪನದೊಡ್ಡಿ**



